# ಚೌಕಾಸಿ ಚಾರುದು ಕುಟುಂಬ ಪ್ರೀತಿ



**ನಯನಾ ನಾಗರಾಜ್**

**ಕಲರ್ಸ್ ಸೂಪರ್ 'ಪಾಪ ಪಾಂಡು'ನ ಚಾರುಲತಾ**

★ *ನಟಿಸುವಾಗ ಸಂಕೋಚ ಆಗುತ್ತಾ?*

ಇಲ್ಲ ಸಂತೋಷವಾಗುತ್ತದೆ. ನಟಿಸುವಾಗ ಏನೂ ಗೊತ್ತೇ ಇರುವುದಿಲ್ಲ. ಮನೆಯಲ್ಲಿ ಪೋಷಕರ ಜೊತೆ ಟಿವಿ ನೋಡುವಾಗಲೇ ಎಲ್ಲಾ ಗೊತ್ತಾಗುತ್ತದೆ. ಪೋಷಕರೇ ನನ್ನ ನಟನೆಯ ವಿಮರ್ಶಕರು. ಸರಿ– ತಪ್ಪುಗಳನ್ನು ಹೇಳುತ್ತಾರೆ. ಸುಧಾರಣೆಯ ಸಂದರ್ಭಗಳನ್ನು ತಿಳಿಸುತ್ತಾರೆ. ಸ್ವತಃ ನಾನೂ ನಗುತ್ತಲೇ ಟಿವಿ ನೋಡುತ್ತೇನೆ. ನನ್ನ ಅಭಿನಯದ ಬಗ್ಗೆ ಆಗ ಹೆಮ್ಮೆ ಅನ್ನಿಸುತ್ತದೆ.

★ *ನಟನೆಯನ್ನು ಕಲಿತಿದ್ದು ಹೇಗೆ?*

ನಾನು ರಂಗ ಗಾಯಕಿ. ಗಾಯನವನ್ನೂ ಶಾಸ್ತ್ರೀಯವಾಗಿ ಕಲಿತಿಲ್ಲ. ಹಾಡಿನ ಮೇಲೆ ಇದ್ದ ಪ್ರೀತಿಯಿಂದ ನಿರಂತರ ಅಭ್ಯಾಸ ಮಾಡಿ ಕಲಿತೆ. 'ದೃಶ್ಯ' ತಂಡದಲ್ಲಿ ಹಾಡ್ತಾ ಇದ್ದೆ. ಮೇಳದಲ್ಲಿ ಕುಳಿತಿದ್ದವಳಿಗೆ ಬಣ್ಣದ ಅರಿವು ಆಗ ಇರಲಿಲ್ಲ. ಒಮ್ಮೆ ಸ್ನೇಹಿತರೊಬ್ಬರು ಜಾಹೀರಾತಿಗೆ ರೂಪದರ್ಶಿಯಾಗಲು ಆಹ್ವಾನಿಸಿದರು. ಒಪ್ಪಿ ಚಿತ್ರೀಕರಣಕ್ಕೆ ಹೋದೆ ಅಲ್ಲಿ ನನಗೆ ಮಾಡಲು ಸಾಧ್ಯ ಆಗಲಿಲ್ಲ. ಅಲ್ಲಿಗೇ ಅದನ್ನು ಬಿಟ್ಟುಬಿಟ್ಟೆ. 'ಕಿನ್ನರಿ'ಯಲ್ಲಿ ನಾಯಕಿ ಪಾತ್ರಕ್ಕೆ ಅವಕಾಶ ಬಂತು. ನಟನೆಗೆ ಬಂದ ಮೊದಲ ಅವಕಾಶ ಅದು. ನನ್ನ ದುರಾದೃಷ್ಟಕ್ಕೆ ನನ್ನ ದಂತಪಂಕ್ತಿ ಅಡ್ಡಬಂದು ಅವಕಾಶ ಕೈ ಬಿಡಬೇಕಾಯಿತು. ಏಕೆಂದರೆ, ಕಿನ್ನರಿ ಬಾಲ್ಯ ಪಾತ್ರವನ್ನು ನಿರ್ವಹಿಸಿದ ಹುಡುಗಿಯ ದಂತಪಂಕ್ತಿ ಸಮನಾಂತರವಾಗಿತ್ತು. ನನ್ನ ಹಲ್ಲು ಅಷ್ಟು ಸಮವಾಗಿಲ್ಲ ಎಂದು ಅದು ಮಿಸ್ ಆಯ್ತು. 'ಶಾತಂ ಪಾಪಂ'ನಲ್ಲಿ ಮೊದಲ ವೇದಿಕೆ ಸಿಕ್ಕಿತು. ಯಾವ ಅಡ್ಡಿ ಆತಂಕ ಇಲ್ಲದೆ ಪಾತ್ರ ನಿಭಾಯಿಸಿದ ಮೇಲೆ ನನಗೂ ನಟಿಸಲು ಬರುತ್ತದೆ ಎನ್ನುವ ಭರವಸೆ ಮೂಡಿತು. ಅದಕ್ಕೆ ಸೂಕ್ತ ಎನ್ನುವಂತೆ 'ಪಾಪ ಪಾಂಡು'ವಿನಲ್ಲಿ ಅಭಿನಯ ಪ್ರಧಾನ ಪಾತ್ರ ಸಿಕ್ಕಿದೆ.

★ *ಚೌಕಾಸಿ ಚಾರು ಅಂತ ಟೀಕೆ ಮಾಡ್ತಾರಲ್ಲ, ಚಾರುಲತಾಳಿಗೆ ಬೇಜಾರ ಆಗಲ್ವಾ?*

ಆಕೆ ಕುಟುಂಬವನ್ನು ತುಂಬಾ ಪ್ರೀತಿಸುವ ಹೆಣ್ಣು. ತನ್ನ ಗಂಡನ ಬಗ್ಗೆ ಅಪಾರ ಪ್ರೀತಿ ಇದೆ. ಅತ್ತೆ– ಮಾವನ ಬಗ್ಗೆ ಗೌರವ ಇದೆ. ಹರಿ ಮತ್ತು ನಾದಿನಿ ಬಗ್ಗೆಯೂ ಅಷ್ಟೇ ವಿಶ್ವಾಸ. ತನ್ನ ಕುಟುಂಬದ ಎಲ್ಲರೂ ಸಂತೋಷವಾಗಿ ಇರಬೇಕು ಎನ್ನುವುದು ಆಕೆಯ ಬಯಕೆ. ಕುಟುಂಬ ವಾತಾವರಣ ಕದಡಲು ಬರುವವರ ಬಗ್ಗೆ ಆಕೆಗೆ ಬೇಸರ ಇದೆಯೇ ಹೊರತು ಮನೆಯವರ ಬಗ್ಗೆ ಅಲ್ಲ. ಅಷ್ಟಕ್ಕೂ ಆಕಸ್ಮಿಕವಾಗಿ ಆಕೆಗೆ ಏನಾದರೂ ಬೇಸರವಾದರೆ ಪುಂಡ ಸಮಾಧಾನ ಮಾಡುತ್ತಾನೆ. ಚಾರುಗೆ ಅತ್ತೆಯ ಕೀಟಲೆ ಬೇಸರ ಅನ್ನಿಸಿದ್ದರೆ ಕನಸಿನಲ್ಲಿ. ಮಾತ್ರ.

★ *ಪಾತ್ರ ದಿನವೂ ಹೊಸ ಕಥೆಗೆ ಸಿದ್ಧವಾಗಬೇಕು. ನಿಮಗೆ ಇದು ಕಷ್ಟ ಅಂತ ಅನ್ನಿಸುವುದಿಲ್ಲವೆ?*

ಚೌಕಾಸಿ ಚಾರು ಪಾತ್ರದಿಂದ ಹೊರ ಬರುವುದಿಲ್ಲ. ಪಾತ್ರವಾಗಿ ಹಾಗೆಯೇ ಇರುತ್ತಾಳೆ. ವಿಶೇಷ ಏನೆಂದರೆ ನಿತ್ಯವೂ ಕಥೆ ಬೇರೆ ಬೇರೆ ಆಗುತ್ತದೆ. ಹಾಸ್ಯವನ್ನು ಉಂಟುಮಾಡುವುದೇ ಕಥೆಯ ಉದ್ದೇಶ. ಇದರಲ್ಲಿ ಅಭಿನಯಕ್ಕೆ ಸಿಕ್ಕಾಪಟ್ಟೆ ಅವಕಾಶ ಇದೆ. ಕಲಿಯಲು ಮತ್ತು ಪ್ರತಿಭೆಯನ್ನು ಹೊರಹೊಮ್ಮಿಸಲು ದೊಡ್ಡ ವೇದಿಕೆ ಎಂದೇ ನಾನು ಭಾವಿಸಿದ್ದೇನೆ. ಇಲ್ಲಿ ಸಮಯಕ್ಕೆ ತುಂಬಾ ಮಹತ್ವ ಇದೆ. ಸಮಯಕ್ಕೆ ಸರಿಯಾಗಿ ಪಂಚ್ ಮಾಡಿದರೆ ಮಾತ್ರ ಕಾಮಿಡಿ ಹುಟ್ಟುತ್ತದೆ. ಇಲ್ಲದಿದ್ದರೆ ಯಾವ ಪ್ರಯೋಜನವೂ ಇಲ್ಲ. ಕಾಮಿಡಿಗೆ ಅದರದೇ ಆದ ಸವಾಲುಗಳಿವೆ. ಭಾವನಾತ್ಮಕ ಇಲ್ಲವೇ ಗಂಭೀರ ಕಥೆಯಂತೆ ಅಲ್ಲ. ಚಾರು ಪಾತ್ರ ನನಗೆ ಅಭಿನಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸಿದೆ. ನಟನೆಯನ್ನೇ ವೃತ್ತಿಯಾಗಿ ತೆಗೆದುಕೊಳ್ಳುವ ಆಸೆಯನ್ನು ಹುಟ್ಟಿಸಿದೆ. ಬೇರೆ ಬೇರೆ ಪಾತ್ರಗಳಲ್ಲಿ ನಟಿಸಬೇಕು, ನಾಯಕಿಯಾಗಿ ಕಾಣಿಸಿಕೊಳ್ಳಬೇಕು ಅನ್ನುವುದಕ್ಕಿಂತ ಅಭಿನಯಕ್ಕೆ ಪ್ರಾಮುಖ್ಯತೆ ಇರುವ ಪಾತ್ರ ನಿರ್ವಹಿಸಬೇಕು. ಬೇರೆ ಬೇರೆ ಪಾತ್ರಗಳಲ್ಲಿ ನಟಿಸಬೇಕು.

★ *ಶೂಟಿಂಗ್ ಮನೆಯ ನಿಮ್ಮ ಅನುಭವ ಹೇಳುವುದಾದರೆ..*

ಸಿಹಿಕಹಿ ಚಂದ್ರು ಸರ್ ಸಿಕ್ಕಾಪಟ್ಟೆ ಖುಷಿ ಖುಷಿಯಿಂದ ನಡೆಸಿಕೊಳ್ಳುತ್ತಾರೆ. ಸಮಯದ ಪರಿವೆ ಇಲ್ಲದಂತೆ ಕೆಲಸ ಮಾಡಲು ಸಾಧ್ಯವಾಗುತ್ತಿದೆ. ಅವರು ನನಗೆ ಮಗಳೇ ಎಂದೇ ಕರೆಯುತ್ತಾರೆ. ಅವರ ಹತ್ತಿರ ಕಲಿಯುವುದು ತುಂಬಾ ಇದೆ. ಒಳ್ಳೆಯ ನಿರ್ದೇಶಕ ಎನ್ನುವುದು ನನಗೆ ಮನದಟ್ಟಾಗಿದೆ. ಹಿರಿಯ ನಟರು– ಕಿರಿಯ ನಟರ ಸಮ್ಮಿಳನ ಅಲ್ಲಿದೆ. ಒಟ್ಟಾರೆ ಶೂಟಿಂಗ್ ಮನೆಯಲ್ಲಿ ಕೌಟುಂಬಿಕ ವಾತಾವರಣ ಇದೆ.

★ *ಡೈಲಾಗ್ ಮರೆತರೆ ಏನು ಮಾಡುತ್ತೀರಿ?*

ಮರೆತು ಬಿಟ್ಟೆ ಎಂದು ನಕ್ಕು ಬಿಡುತ್ತೇನೆ. ತಕ್ಷಣ ನಿರ್ದೇಶಕರು ಕಟ್ ಅಂತ ಹೇಳುತ್ತಾರೆ. ಅವರು ಡೈಲಾಗ್ ಹೇಳಿಕೊಟ್ಟ ಮೇಲೆ ಕತೆ ಮುಂದುವರಿಯುತ್ತೆ. ಇಲ್ಲದಿದ್ದರೆ ಡೈಲಾಗ್ ಮರೆತು ಹೋಯಿತು ಎಂದು ನಗುಬೀರಿ ಸ್ತಬ್ಧಚಿತ್ರದಂತೆ ಅಲುಗಾಡದೆ ನಿಂತು ಬಿಡುತ್ತೇನೆ. ಇದೂ ಒಂಥರಾ ಹಾಸ್ಯ ಆ ಕ್ಷಣಕ್ಕೆ.

■ **ರಾಘವೇಂದ್ರ**